

# ಕವಲು ಬಾಲದ ಚಿಟವ

**ಬೇರೆಲ್ಲ ಹಕ್ಕಿಗಳು ಸುರಕ್ಷಿತ ಗೂಡು ಕಟ್ಟಿ ಮರಿ ಮಾಡಿದರೆ. ಈ ಹಕ್ಕಿಗಳು ನೆಲದಲ್ಲೇ ಮೊಟ್ಟೆಗಳನ್ನಿಟ್ಟು ಯಾವ ರಕ್ಷಣೆಯೂ ಇಲ್ಲದೆ ಬಾಣಂತನ ಮಾಡುತ್ತವೆ! ಸಂತಾನಾಭಿವೃದ್ಧಿ ಕಾಲದಲ್ಲಿ ಇವುಗಳ ಗದ್ದಲ ಹೆಚ್ಚು.**

ಚಿತ್ರಲೇಖನ:
**ಶಶಿಧರಸ್ವಾಮಿ ಹಿರೇಮಠ**

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಅತ್ತಿವೇರಿ ಪಕ್ಷಿ ಧಾಮವು ವಲಸೆ ಪಕ್ಷಿಗಳ ಸುಂದರ ತಾಣ. ಇಲ್ಲಿಯ ಉಪ ವಲಯ ಅರಣ್ಯಾಧಿಕಾರಿ ಪರಮೇಶ ಆನವಟ್ಟಿ ಆ ದಿನ ಫೋನ್ ಮಾಡಿ, 'ಪಕ್ಷಿಧಾಮಕ್ಕೆ ಪ್ರಾಟಿನ್ ಕೋಲ್ ಪಕ್ಷಿಗಳು ವಲಸೆ ಬಂದು ಸಂತಾನಾಭಿವೃದ್ಧಿ ಮಾಡುತ್ತಿವೆ' ಎಂದು ತಿಳಿಸಿದಾಗ ಅವುಗಳ ಫೋಟೋಗ್ರಫಿ ಮಾಡುವ ಆಸೆ ಹುಟ್ಟಿತು. ಬೆಳಗಿನ ಜಾವ ಕ್ಯಾಮರಾ ಹೊತ್ತು ಅತ್ತಿವೇರಿಯತ್ತ ಪ್ರಯಾಣ ಬೆಳೆಸಿದೆ.

ಕೆರೆಯ ದಡದಲ್ಲಿದ ದೋಣಿ ಹತ್ತಿ ಪೆಡಲ್ ತುಳಿಯುತ್ತಾ ಸಾಗಿ ದ್ವೀಪದಂತಿದ್ದ ನಡುಗಡ್ಡೆ ತಲುಪಿದೆವು. ಹಚ್ಚ ಹಸಿರಾಗಿ ಬೆಳೆದ ಹುಲ್ಲಿನ ನಡುಗಡ್ಡೆಯಲ್ಲಿ ನಿಧಾನವಾಗಿ ದೋಣಿಯಿಂದ ಇಳಿಯುತ್ತಿದ್ದ ಹಾಗೆ ನೂರಾರು ಹಕ್ಕಿಗಳು ಒಂದೇ ಸಮನೆ ಕೂಗು ಹಾಕುತ್ತಾ ಬಾನೆತ್ತರಕ್ಕೆ ಒಮ್ಮೆಲೆ ಚಿಮ್ಮಿದವು. ನಿಧಾನವಾಗಿ ಹೆಜ್ಜೆ ಹಾಕುತ್ತಾ ನಡೆದು ಹೋಗುವಾಗ ನೆಲದ ಮೇಲೆಯೇ ಅವುಗಳ ಗೂಡುಗಳಿದ್ದವು. ಒಂದು ಕ್ಷಣ ಕಸಿವಿಸಿಯಾಯಿತು. ನೆಲದ ಮೇಲೆ ಮೊಟ್ಟೆಗಳಿದ್ದವು. ಮೊಟ್ಟೆಗಳಿಗೆ ಯಾವುದೇ ಗೂಡು ನಿರ್ಮಾಣವಾಗಿರಲಿಲ್ಲ.

ವಿಚಿತ್ರ ನೋಡಿ– ಎಲ್ಲ ಪಕ್ಷಿಗಳೂ ಸುಂದರವಾದ, ವೈವಿಧ್ಯಮಯ ಗೂಡುಗಳನ್ನು ನಿರ್ಮಿಸಿ ಮೊಟ್ಟೆ ಇಡುತ್ತವೆ. ಆದರೆ ಈ ಪಕ್ಷಿಗಳು ಬರೀ ನೆಲದ ಮೇಲೆ ಮೊಟ್ಟೆ ಇಟ್ಟು ಯಾವುದೇ ರಕ್ಷಣೆ ಸಹ ಇರದೇ ಮರಿ ಮಾಡುತ್ತವೆ. ಕಪ್ಪು ಚುಕ್ಕೆಗಳಿರುವ ಬೂದುಕಂದು ವರ್ಣದ 23 ಮೊಟ್ಟೆಗಳಿರುವ ಗೂಡು, ಮೊಟ್ಟೆಗಳು ನೆಲದ ಬಣ್ಣದಂತೆ ಇದ್ದು 'ಕ್ಯಾಮೋಪ್ಲೈಜ್' ಆಗಿದ್ದವು. ಇನ್ನೂ ಕೆಲ ಗೂಡುಗಳಲ್ಲಿ ಕಣ್ಣು ಬಿಡದ ಸಣ್ಣ ಮರಿಗಳು!

ಎಲ್ಲಿ ಆ ಮೊಟ್ಟೆಗಳ ಮೇಲೆ ಕಾಲಿಡುತ್ತೇನೋ ಎಂಬ ಎಚ್ಚರಿಕೆಯಿಂದಲೇ ನಿಧಾನವಾಗಿ ನಡೆದು ಒಂದು ಕಡೆ ಕುಳಿತು ಹಕ್ಕಿಗಳ ಫೋಟೋಗ್ರಫಿಗೆ ಸಿದ್ಧನಾದೆ. ಪರಮೇಶ್ ದ್ವೀಪವನ್ನು ಸುತ್ತು ಹಾಕಿ ಬಂದು ಹೊರಟು ಹೋದರು. ಕೆಲ ಹಕ್ಕಿಗಳು ನೆಲಕ್ಕೆ ಬಿದ್ದು ರೆಕ್ಕೆಗಳನ್ನು ಹೊಸೆಯುತ್ತಾ ಹೊರಳಾಡುವಂತೆ ನಟಿಸುತ್ತಿದ್ದವು. ಅನುಮಾನ ಬಂದು ಅವುಗಳ ಹತ್ತಿರ ಹೋದೆ. ಅದು ನೋಡಿದರೆ ತಮ್ಮ ಮೊಟ್ಟೆಗಳ ರಕ್ಷಣೆಗಾಗಿ ಅವು ಮಾಡಿದ ನಾಟಕವಾಗಿತ್ತು! ಅಂದರೆ ನನ್ನ ಚಿತ್ತ ಆ ಮೊಟ್ಟೆಗಳತ್ತ ಹೋಗದಿರಲಿ ಎಂದು ಮಾಡಿದ ರಕ್ಷಣಾ ತಂತ್ರ. ಇನ್ನು ಕೆಲವು ಹಕ್ಕಿಗಳು ದೇಹವನ್ನು ಕುಗ್ಗಿಸಿಕೊಂಡು ನಿಶ್ಚಲವಾಗಿ ಕುಳಿತಿದ್ದವು. ಬಳಿಕ ಒಮ್ಮೆಲೆ 'ಜೆಟ್ ಫೈಟರ್' ವಿಮಾನಗಳಂತೆ ಒಟ್ಟಾಗಿ ಬಾನಂಗಳಕ್ಕೆ ಚಿಮ್ಮುತ್ತಿದ್ದವು. ಯಾರದೋ ಕಮ್ಯಾಂಡರ್ ಆಜ್ಞೆ ಸಿಕ್ಕಂತೆ, ಇಡೀ ಪಕ್ಷಿ ಸಮೂಹವೇ ಹಠಾತ್ತಾಗಿ ಗಾಳಿಯಲ್ಲಿ ತೇಲಾಡುತ್ತಾ